# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **938**

ಸದಸ್ಯರ ಹೆಸರು : ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11-03-2026

| | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಮೂರು ವರ್ಷಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಸಾವು-ಗಾಯಗಳಾದವರ ಸಂಖ್ಯೆ ಎಷ್ಟು; | ಕಳೆದ 06 ವರ್ಷಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳು ಹಾಗೂ ಅವುಗಳಲ್ಲಿ ಸಾವು-ಗಾಯಾಳುಗಳ ಸಂಖ್ಯೆಯ ವಿವರಗಳು ಕೆಳಕಂಡಂತಿದೆ. |

| ವರ್ಷ | ಅಪಘಾತಗಳ ಸಂಖ್ಯೆ | ಸಾವುಗಳ ಸಂಖ್ಯೆ | ಗಾಯಗೊಂಡವರ ಸಂಖ್ಯೆ: |
|---|---|---|---|
| **2019** | 40658 | 10958 | 50447 |
| **2020** | 34178 | 9760 | 39492 |
| **2021** | 34647 | 10038 | 40754 |
| **2023** | 43440 | 12321 | 52547 |
| **2024** | 43062 | 12390 | 52591 |
| **2025** | 43129 | 11324 | 53938 |
| **ಒಟ್ಟು** | 2,39,114 | 66,791 | 2,89,769 |

| | ಪ್ರಶ್ನೆ | ಉತ್ತರ |
|---|---|---|
| (ಆ) | ಅಪಘಾತ ಹೆಚ್ಚು ಸಂಭವಿಸುವ "ಬ್ಲಾಕ್ ಸ್ಪಾಟ್" ಗಳನ್ನು ಗುರುತಿಸಲಾಗಿದೆಯೇ; ಇದ್ದಲ್ಲಿ, ಸದರಿ ಜಾಗಗಳಲ್ಲಿ ಅಪಘಾತ ಸಂಭವಿಸದಂತೆ ಜಾಗೃತಿ ವಹಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು: | ಘನ ಸರ್ವೋಚ್ಚ ನ್ಯಾಯಾಲಯದ ಶಿಫಾರಸು ಹಾಗೂ ನಿರ್ದೇಶನಗಳಂತೆ ಕರ್ನಾಟಕ ರಸ್ತೆ ಸುರಕ್ಷತಾ ನೀತಿ - 2015 ನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: PWD/42/EAP/2017, ದಿನಾಂಕ:04.04.2017 ರನ್ವಯ ಕಪ್ಪು ಸ್ಥಳಗಳನ್ನು ಗುರುತಿಸಲು ಹಾಗೂ ಕ್ರಿಯಾ ಯೋಜನೆಯನ್ನು ತಯಾರಿಸಲು ಪ್ರಮಾಣಿತ ಕಾರ್ಯಾಚರಣಾ ವಿಧಾನ (Standard Operating Procedure) ಹಾಗೂ ಪ್ರೋಟೊಕಾಲ್ ರೂಪಿಸಲಾಗಿದ್ದು, ಸದರಿ ಪ್ರೋಟೊಕಾಲ್ ಅನ್ವಯ 2020ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದಿಂದ 942 ಕಪ್ಪು ಸ್ಥಳಗಳನ್ನು ಗುರುತಿಸಲಾಗಿರುತ್ತದೆ. ಸದರಿ ಕಪ್ಪು ಸ್ಥಳಗಳ ಇಲಾಖಾವಾರು ವಿವರಗಳು ಕೆಳಕಂಡಂತಿದೆ. |

| ಕ್ರ. ಸಂ. | ರಸ್ತೆ ನಿರ್ವಹಣಾ ಪ್ರಾಧಿಕಾರ | ಕಪ್ಪು ಸ್ಥಳಗಳ ಸಂಖ್ಯೆ |
|---|---|---|
| 1 | PWD (C & B) | 214 |
| 2 | PWD (NH) | 169 |
| 3 | NHAI | 459 |
| 4 | PWD (KSHIP) | 40 |
| 5 | PWD (KRDCL) | 15 |
| 6 | NICE | 3 |
| 7 | BBMP | 27 |
| 8 | Belgaum City Corporation | 2 |
| 9 | CMC Raichur | 1 |
| 10 | CMC Bellary | 2 |
| 11 | BRTS | 2 |
| 12 | Koppal | 1 |
| 13 | Shimoga City Corporation | 1 |

| | ಪ್ರಶ್ನೆ | ಉತ್ತರ |
|---|---|---|

| | | |
|---|---|---|
| 14 | CMC Belagavi | 1 |
| 15 | CMC Bidar | 1 |
| 16 | CMC Shimoga | 2 |
| 17 | CMC Bijapur | 1 |
| 18 | PRED | 1 |
| | ಒಟ್ಟು | 942 |

ಕಪ್ಪು ಸ್ಥಳಗಳಲ್ಲಿ (Black Spot) ಅಪಘಾತಗಳನ್ನು ತಗ್ಗಿಸಲು ಅಲ್ಪಾವಧಿ ಸುರಕ್ಷತಾ ಕ್ರಮಗಳಾಗಿ, ಎಚ್ಚರಿಕಾ ಸೂಚನಾ ಫಲಕಗಳ ಅಳವಡಿಕೆ, ರಸ್ತೆ ಮಾರ್ಕಿಂಗ್‌ಗಳು, ವೇಗ ನಿಯಂತ್ರಣ ಕ್ರಮಗಳು, ವೈಜ್ಞಾನಿಕ ಸ್ಪೀಡ್ ಬ್ರೇಕರ್‌ಗಳ ನಿರ್ಮಾಣ ಹಾಗೂ ರಸ್ತೆ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಮತ್ತು ದೀರ್ಘಾವಧಿ ಶಾಶ್ವತ ಪರಿಹಾರ ಕ್ರಮಗಳಾಗಿ ರಸ್ತೆ ತಿರುವುಗಳಲ್ಲಿ ಅಭಿವೃದ್ಧಿ-ಅಗಲೀಕರಣ, ಜಂಕ್ಷನ್ ಅಭಿವೃದ್ಧಿ-ಅಗಲೀಕರಣ, ಅಂಡರ್‌ಪಾಸ್ ಮತ್ತು ಓವರ್‌ಪಾಸ್ ನಿರ್ಮಾಣ, ಕ್ರ್ಯಾಷ್ ಬ್ಯಾರಿಯರ್ಸ್ / ಸೋಲಾರ್ ಬ್ಲಿಂಕರ್ಸ್ ಅಳವಡಿಕೆ ಹಾಗೂ ಇತರೆ ರಸ್ತೆ ಸುರಕ್ಷತೆ ಕ್ರಮಗಳನ್ನು ಕೈಗೊಳ್ಳಲು ಎಲ್ಲಾ ಪಾಲುದಾರಿಕಾ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ.

**ಇ)** ಶಾಲಾ ವಾಹನಗಳ ಸುರಕ್ಷತಾ ನಿಯಮ ಪಾಲನೆ, ಪರಿಶೀಲನೆ ಕಾರ್ಯ ಹೇಗೆ ನಡೆಯುತ್ತಿದೆ;

ಶಾಲಾ ವಾಹನಗಳ ಸುರಕ್ಷತಾ ನಿಯಮ ಪಾಲನೆ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ 13029/1985 ದಿನಾಂಕ: 20-11-1997, 16-12-1997, ರಲ್ಲಿ ನೀಡಿರುವ ನಿರ್ದೇಶನದಂತೆ ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989 ಕ್ಕೆ ತಿದ್ದುಪಡಿ ತಂದು Conditions for Vehicles engaged in Transport of School Children Rules 2012 ಅನ್ನು ಅಧಿಸೂಚನೆ ಸಂಖ್ಯೆ ಸಾರಿಇ 01 ಸಾಇಪ 2011 ದಿನಾಂಕ: 18-01-2013ರಲ್ಲಿ ಹೊರಡಿಸಲಾಗಿರುತ್ತದೆ ಸದರಿ ಅಧಿಸೂಚನೆಯಲ್ಲಿ ಶಾಲಾ ವಾಹನಗಳು ಪಾಲಿಸಬೇಕಾದ ನಿಬಂಧನೆಗಳ ಬಗ್ಗೆ ತಿಳಿಸಿದ್ದು, ಸದರಿ ನಿಬಂಧನೆಗಳನ್ನು ಹಾಗೂ ಅಗತ್ಯ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ.

ಇದಲ್ಲದೆ ಅನಧಿಕೃತವಾಗಿ ಯಾವುದೇ ಸುರಕ್ಷತಾ ಕ್ರಮಪಾಲಿಸದ ಶಾಲಾ ವಾಹನಗಳ ವಿರುದ್ಧ ಕಾಲಕಾಲಕ್ಕೆ ವಿಶೇಷ ಪ್ರವರ್ತನ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು 2025-26ನೇ ಸಾಲಿನಲ್ಲಿ ತಪಾಸಣೆಗೆ ಒಳಪಡಿಸಿರುವ ವಾಹನಗಳ ವಿವರಗಳು ಈ ಕೆಳಕಂಡಂತಿವೆ

| ತಪಾಸಿಸಿರುವ ವಾಹನಗಳ ಸಂಖ್ಯೆ | ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಜಪ್ತಿಗೊಳಿಸಿರುವ ವಾಹನಗಳ ಸಂಖ್ಯೆ | ವಸೂಲಿಸಿರುವ ದಂಡ |
|---|---|---|---|
| 10036 | 1068 | 49 | 75,70,163 |

ಬೆಂಗಳೂರು ಸಂಚಾರ ವಿಭಾಗದಿಂದ ಸ್ಟೂಡೆಂಟ್ಸ್ ಅಸೋಸಿಯೇಷನ್ ಫಾರ್ ರೋಡ್ ಸೇಫ್ಟಿ ಯೋಜನೆಯಡಿಯಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸಲು ಕ್ರಮಕೈಗೊಂಡಿದೆ.

| | ಪ್ರಶ್ನೆ | ಉತ್ತರ |
|---|---|---|
| | | ಸೇಫ್ ರೂಟ್ ಸ್ಕೂಲ್ ಯೋಜನೆಯಡಿಯಲ್ಲಿ ಶಾಲಾ ವಿದ್ಯಾರ್ಥಿಗಳ ಸುರಕ್ಷತೆಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಏರ್ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br><br>ಶಾಲಾ ವಾಹನ ಚಾಲಕರುಗಳಿಗೆ ಮೂಲಭೂತ ರಸ್ತೆ ಸುರಕ್ಷತಾ ನಿಯಮಗಳನ್ನು ಪ್ರಾಯೋಗಿಕವಾಗಿ ಬೋಧಿಸುವ ಉದ್ದೇಶವನ್ನು ಹೊಂದಿ, ಸಂಚಾರಿ ಪಾರ್ಕ್ ಅನ್ನು ಸ್ಥಾಪಿಸಲಾಗಿದ್ದು, ಸದರಿ ಪಾರ್ಕ್‌ಗೆ ವಿದ್ಯಾರ್ಥಿಗಳು ಹಾಗೂ ಶಾಲಾ ವಾಹನಗಳ ಚಾಲಕರುಗಳನ್ನು ಕರೆತಂದು ರಸ್ತೆ ಸುರಕ್ಷತೆ ನಿಯಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿರುತ್ತದೆ.<br><br>ಎಲ್ಲಾ ಜಿಲ್ಲಾ ಘಟಕಗಳಲ್ಲಿ ಜಿಲ್ಲಾಧಿಕಾರಿಗಳ ಹಾಗೂ ಬೆಂಗಳೂರು ನಗರದಲ್ಲಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಅಧ್ಯಕ್ಷತೆಯಲ್ಲಿ ಪ್ರತಿ 3 ತಿಂಗಳಿಗೊಮ್ಮೆ ನಡೆಯುವ ರಸ್ತೆ ಸುರಕ್ಷತಾ ಸಮಿತಿಯ ಸಭೆಗಳಲ್ಲಿ ಹಾಜರಾಗುವ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡಂತೆ ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯತೆ ಹೊಂದಿ, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿರುತ್ತದೆ.<br><br>ಬೆಂಗಳೂರು ನಗರ ಒಳಗೊಂಡಂತೆ ರಾಜ್ಯದ ಎಲ್ಲಾ ಘಟಕಗಳಲ್ಲಿ ಶಾಲಾ ಮಕ್ಕಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಶಾಲಾ ವಾಹನಗಳ ಚಾಲಕರುಗಳ ನಿಯಮ ಉಲ್ಲಂಘನೆಗಳ ವಿರುದ್ಧ ಐ.ಎಂ.ವಿ. ಕಾಯ್ದೆಯಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲು ಕಾಲ ಕಾಲಕ್ಕೆ ವಿಶೇಷ ಕಾರ್ಯಾಚರಣೆಯನ್ನು ಆಯೋಜಿಸಲಾಗುತ್ತಿರುತ್ತದೆ.<br><br>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಶಾಲಾ ಮಕ್ಕಳ ಸುರಕ್ಷತೆಯನ್ನು ಕಾಪಾಡುವ ದೃಷ್ಠಿಯಿಂದ ಆಯಾ ಪೊಲೀಸ್ ಠಾಣಾ ವ್ಯಾಪ್ತಿಗಳಿಗೆ ಬರುವ ಶಾಲಾ ಕಾಲೇಜುಗಳಿಗೆ ಕಾಲ ಕಾಲಕ್ಕೆ ಭೇಟಿ ನೀಡಿ, ಶಾಲೆಗಳ ಆಡಳಿತ ಮಂಡಳಿಯವರೊಂದಿಗೆ ಸಮನ್ವಯ ಸಾಧಿಸಿ, ಶಾಲಾ ವಾಹನಗಳು ಪಾಲಿಸಬೇಕಾದ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ತಪ್ಪದೇ ಅನುಸರಿಸಲು ಸೂಚಿಸಲಾಗುತ್ತಿರುತ್ತದೆ.<br><br>ಬೆಂಗಳೂರು ನಗರದಲ್ಲಿ ಹಲವು ಶಾಲೆಗಳಲ್ಲಿ ಬಿ.ಎಂ.ಟಿ.ಸಿ. ವಾಹನಗಳನ್ನು ಶಾಲಾ ಮಕ್ಕಳು ಕರೆದೊಯ್ಯಲು ಶಾಲಾ ವಾಹನಗಳನ್ನಾಗಿ ಉಪಯೋಗಿಸುತ್ತಿರುವುದರಿಂದ, ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಬಿ.ಎಂ.ಟಿ.ಸಿ. ವಾಹನ ಚಾಲಕರಿಗೆ ತರಬೇತಿಯನ್ನು ಆಯೋಜಿಸಲಾಗಿರುತ್ತದೆ.<br><br>ಶಾಲಾ ಮಕ್ಕಳನ್ನುಕರೆದೊಯ್ಯುವ ಶಾಲಾ ವಾಹನಗಳ ಚಾಲಕರುಗಳನ್ನು ನಿಯಮಿತವಾಗಿ ತಪಾಸಣೆ ನಡೆಸಲಾಗುತ್ತಿದೆ.<br><br>ಶಾಲೆಗಳ ಪ್ರಾರಂಭದ ಮತ್ತು ಮುಕ್ತಾಯದ ಅವಧಿಯಲ್ಲಿ ಶಾಲಾ ಆವರಣಗಳ ಬಳಿ ಸ್ಥಳೀಯ ಪೊಲೀಸರು ಹಾಜರಿದ್ದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ. |

| | ಪ್ರಶ್ನೆ | ಉತ್ತರ |
|---|---|---|
| | | ಬೆಂಗಳೂರು ನಗರದಲ್ಲಿ ಶಾಲಾ ಮಕ್ಕಳ ಹಿತರಕ್ಷಣೆಯನ್ನು ಕಾಪಾಡುವ ಸಲುವಾಗಿ ಶಾಲಾ ವಾಹನಗಳ ಚಾಲಕರುಗಳಿಗೆ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆ, ಹಾಗೂ ಸಂಚಾರಿ ಪಾರ್ಕ್‌ನಲ್ಲಿ ತರಬೇತಿಯನ್ನು ಆಯೋಜಿಸಿ, ಸಂಚಾರ ನಿಯಮ ಪಾಲನೆ, ಅವುಗಳ ಮಹತ್ವ ಶಾಲಾ ಮಕ್ಕಳನ್ನು ಕರೆದೊಯ್ಯುವಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ತರಬೇತಿಯನ್ನು ನೀಡಲಾಗುತ್ತಿರುತ್ತದೆ. ಈ ಯೋಜನೆಯಲ್ಲಿ 2024 ನೇ ಸಾಲಿನಲ್ಲಿ 744 ಹಾಗೂ 2025 ನೇ ಸಾಲಿನಲ್ಲಿ 673 ಶಾಲಾ ವಾಹನ ಚಾಲಕರುಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ. ಹಾಗೂ ಈ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲು ಕ್ರಮ ವಹಿಸಲಾಗಿರುತ್ತದೆ. |
| ಈ) | ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ನಿಯಂತ್ರಣಕ್ಕೆ ಸರ್ಕಾರ ಯಾವ ಯಾವ ವಿಶೇಷ ಅಭಿಯಾನಗಳನ್ನು ಹಮ್ಮಿಕೊಂಡಿದೆ? | ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವ ಚಾಲಕರಿಗೆ ಅರಿವು ಮೂಡಿಸಲು ರಸ್ತೆ ಸುರಕ್ಷತಾ ಕಾರ್ಯಕ್ರಮದಡಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯು ಶಿಫಾರಸು ಮಾಡುವ ಚಾಲನಾ ಅನುಜ್ಞಾ ಪತ್ರವನ್ನು ನಿರ್ದಿಷ್ಟ ಅವಧಿಗೆ ಅಮಾನತ್ತು ಮಾಡಲು ಆಯಾ ಪ್ರಾದೇಶಿಕ ಸಾರಿಗೆ ಕಛೇರಿಗಳ ವ್ಯಾಪ್ತಿಯಲ್ಲಿ ಕ್ರಮವಹಿಸಲಾಗುತ್ತಿದೆ.<br><br>2025-26ನೇ ಸಾಲಿನಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿರುವವರ ವಿರುದ್ಧ ಪೊಲೀಸ್ ಇಲಾಖೆಯಿಂದ ಚಾಲನಾ ಅನುಜ್ಞಾ ಪತ್ರ ಅಮಾನತ್ತುಪಡಿಸಲು ಶಿಫಾರಸು ಮಾಡಿರುವ ಪ್ರಕರಣಗಳ ಮೇಲೆ ಕೈಗೊಂಡಿರುವ ಕ್ರಮದ ವಿವರ ಕೆಳಕಂಡಂತಿದೆ: |

| ಪ್ರಕರಣಗಳ ಸಂಖ್ಯೆ | ಅಮಾನತ್ತು ಪಡಿಸಲಾದ ಚಾಲನಾ ಅನುಜ್ಞಾ ಪತ್ರಗಳ ಸಂಖ್ಯೆ | ಅಮಾನತ್ತು ಪಡಿಸಲು ಕಾರ್ಯ ಪ್ರಗತಿಯಲಿರುವ ಚಾಲನಾ ಅನುಜ್ಞಾ ಪತ್ರ ಗಳ ಸಂಖ್ಯೆ |
|---|---|---|
| 2918 | 1757 | 1161 |

ಚಾಲನಾ ಅನುಜ್ಞಾ ಪತ್ರಗಳನ್ನು ಅಮಾನತ್ತುಪಡಿಸಲು ವಿವಿಧ ಕಛೇರಿಗಳಲ್ಲಿ ಕಾರ್ಯ ಪ್ರಗತಿಯಲ್ಲಿದ್ದು 1161 ಅನುಜ್ಞಾ ಪತ್ರಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ನೋಟೀಸ್ ಅನ್ನು ನೀಡಲಾಗಿರುತ್ತದೆ.

ಬೆಂಗಳೂರು ನಗರ ಸಂಚಾರ ವಿಭಾಗದಿಂದ ನಿರಂತರವಾಗಿ ವಾರದ ಕೊನೆಯ ದಿನಗಳಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆಯ ವಿರುದ್ಧ ಪ್ರಕರಣಗಳನ್ನು ದಾಖಲಿಸುವ ವಿಶೇಷ ಕಾರ್ಯಾಚರಣೆಯನ್ನು ಆಯೋಜಿಸಲಾಗುತ್ತಿರುತ್ತದೆ. ರಾಜ್ಯದ ಎಲ್ಲಾ ಘಟಕಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಕ್ರಮವಾಗಿ 2023 ನೇ ಸಾಲಿನಲ್ಲಿ 21442, 2024 ನೇ ಸಾಲಿನಲ್ಲಿ 52001 ಹಾಗೂ 2025 ನೇ ಸಾಲಿನಲ್ಲಿ 68474 ಪ್ರಕರಣಗಳನ್ನು ದಾಖಲು ಮಾಡಲಾಗಿರುತ್ತದೆ. ಈ ವಿಶೇಷ ಕಾರ್ಯಾಚರಣೆಯನ್ನು ಕಾಲ ಕಾಲಕ್ಕೆ ವಿಶೇಷ ಸಂದರ್ಭಗಳಲ್ಲಿ ನಿರಂತರವಾಗಿ ಕೈಗೊಳ್ಳಲಾಗುತ್ತಿರುತ್ತದೆ.

| | ಪ್ರಶ್ನೆ | ಉತ್ತರ |
|---|---|---|
| | | ಸಾಮಾಜಿಕ ಜಾಲತಾಣಗಳ ಮೂಲಕ ಮದ್ಯಪಾನ ಮಾಡಿ, ವಾಹನ ಚಾಲನೆಯಿಂದ ಉಂಟಾಗುವ ಅನಾಹುತಗಳ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.<br><br>ಬೆಂಗಳೂರು ನಗರ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಮದ್ಯಪಾನ ಚಾಲನೆಯಿಂದ ಉಂಟಾಗುವ ಅನಾಹುತಗಳ ಬಗ್ಗೆ ಸಂಸ್ಥೆಗೆ ಹಾಜರಾಗುವ ಎಲ್ಲಾ ಬಗೆಯ ವಾಹನ ಚಾಲಕರುಗಳಿಗೆ ಅರಿವು ಮೂಡಿಸುವ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿರುತ್ತದೆ.<br><br>ರಾಜ್ಯದ ಎಲ್ಲಾ ಘಟಕಗಳಲ್ಲಿ ಇತ್ತೀಚೆಗೆ ರಾಷ್ಟ್ರೀಯ ರಸ್ತೆ ಸುರಕ್ಷತಾ ಪ್ರಾಧಿಕಾರದ ನಿರ್ದೇಶನಗಳನ್ವಯ ಹಮ್ಮಿಕೊಳ್ಳಲಾದ "ರಸ್ತೆ ಸುರಕ್ಷತಾ ಮಾಸ" ಆಚರಣೆಯ ವೇಳೆಯಲ್ಲಿ ಎಲ್ಲಾ ಸಾರ್ವಜನಿಕರಿಗೆ ಮದ್ಯಪಾನ ಮಾಡಿ, ವಾಹನ ಚಾಲನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. |

**ಟಿಡಿ 10 ಟಿಡಿಕ್ಯೂ 2026**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.